# ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)
## THE MALLESWARAM ASSOCIATION (REGD.)
No. 110, 7th Cross, Malleswaram, Bangalore – 560 003
Ph : 080-23311276 / 080-23311388
e-mail : themalleswaramassociation@gmail.com website:tmaclub.in


# ಸಂಘದ ಕಾರ್ಯಕಾರಿ ಮಂಡಳಿಗೆ
# 2026–2028ನೇ ಸಾಲಿನ
# ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆ

## ದಿನಾಂಕ : 22–02–2026, ಭಾನುವಾರ
## ಸಮಯ : ಬೆಳಿಗ್ಗೆ 10–00 ರಿಂದ ಸಂಜೆ 4–00 ರವರೆಗೆ

**ತೆರೆದ–ಅಂಚೆ**

**ಗೆ,**

ಶ್ರೀಮತಿ/ಶ್ರೀ.................................................................

.............................................................................

.............................................................................

**ಇವರಿಂದ :**
**ಆಡಳಿತಾಧಿಕಾರಿಗಳು**
**ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)**
**ನಂ. 110, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.**
**ಹಾಗೂ**
**ಸಹಕಾರ ಸಂಘಗಳ ಸಹಾಯಕ ನಿಬಂಧಕರು,**
**ಸಹಕಾರ ಇಲಾಖೆ, 4ನೇ ವಲಯ,**
**ಮಲ್ಲೇಶ್ವರಂ, ಬೆಂಗಳೂರು – 560 003.**

# ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)
# THE MALLESWARAM ASSOCIATION (REGD.)
No. 110, 7th Cross, Malleswaram, Bangalore – 560 003
Ph : 080-23311276 / 080-23311388
e-mail : themalleswaramassociation@gmail.com website:tmaclub.in


ದಿನಾಂಕ : 31-01-2026

## ಸೂಚನಾ ಪತ್ರ

ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಅಧೀನ ಕಾರ್ಯದರ್ಶಿ-3 ರ ಆದೇಶ ಸಂಖ್ಯೆ: ಸಿಒ/ಸಿಎಸ್‌ಆರ್/2024 ಬೆಂಗಳೂರು ದಿನಾಂಕ : 05-10-2024 ಹಾಗೂ ದಿನಾಂಕ : 17-11-2025 ರ ರೀತ್ಯಾ ಮೇಲ್ಕಂಡ ಅಸೋಸಿಯೇಷನ್‌ನ ಆಡಳಿತಾಧಿಕಾರಿಯಾಗಿ ದಿನಾಂಕ : 16-10-2024 ರಂದು ಪ್ರಭಾರ ವಹಿಸಿಕೊಂಡಿರುತ್ತೇನೆ. ಮುಂದುವರೆದು ಸದರಿ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ : 04-04-2026 ರವರೆಗೆ ವಿಸ್ತರಿಸಿಕೊಳ್ಳಲಾಗಿರುತ್ತದೆ.

ಆಡಳಿತಾಧಿಕಾರಿ ಅವಧಿಯಲ್ಲಿ ಸರ್ಕಾರದ ಆದೇಶದ ರೀತ್ಯಾ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಸರ್ಕಾರಕ್ಕೆ ವರದಿ ಮಾಡುವಂತೆ ತಿಳಿಸಿರುತ್ತಾರೆ.

ಸಂಘದಲ್ಲಿನ ನ್ಯೂನ್ಯತೆಗಳ ಬಗ್ಗೆ ಸಂಘ ಸಂಸ್ಥೆಗಳ ಜಿಲ್ಲಾ ನೋಂದಣಾಧಿಕಾರಿಗಳು 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರು ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ಕಲಂ 25 ರ ವಿಚಾರಣೆ ನಡೆಸುವಂತೆ ಆದೇಶ ಮಾಡಿದ್ದು ಸದರಿ ವಿಚಾರಣೆಯು ಪೂರ್ಣಗೊಂಡು ದಿನಾಂಕ : 08-12-2025 ರಂದು ವಿಚಾರಣಾ ವರದಿಯೊಂದಿಗೆ ನೋಂದಣಾಧಿಕಾರಿಗಳು ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ಕಲಂ 25 (2)(ಸಿ)(iii) ರಡಿ ನಿಯಾಮಾನುಸಾರ ಮುಂದಿನ ಕ್ರಮಕ್ಕಾಗಿ ಆಡಳಿತಾಧಿಕಾರಿಗಳಿಗೆ ನೀಡಿರುತ್ತಾರೆ.

ಸದರಿ ವಿಚಾರಣಾ ವರದಿಯ ಮೇಲೆ ನೀಡಿರುವ ನಿರ್ದೇಶನದ ಮೇಲೆ ಅಂದಿನ ಕಾರ್ಯಕಾರಿ ಮಂಡಳಿ ಸದಸ್ಯರುಗಳಿಗೆ ತಿಳುವಳಿಕೆ ಪತ್ರ ನೀಡಲಾಗಿದ್ದು ಅವರುಗಳು ಲಿಖಿತ ಸಮಜಾಯಿಷಿ ಸಲ್ಲಿಸಿರುತ್ತಾರೆ. ಶಾಸನಬದ್ಧ ವಿಚಾರಣಾ ವರದಿಯ ಮೇಲೆ ನೀಡಿರುವ ತಿಳುವಳಿಕೆ ಪತ್ರಕ್ಕೆ ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಿ ಅಸೋಸಿಯೇಷನ್ ಅಂದಿನ ಗೌರವ ಕಾರ್ಯದರ್ಶಿ ಹಾಗೂ ಗೌರವ ಖಜಾಂಚಿ ರವರನ್ನು ಸುಸ್ತಿದಾರರನ್ನಾಗಿ ಪರಿಗಣಿಸಿ ಆರ್ಥಿಕ ವ್ಯವಹಾರದಲ್ಲಿ ನೇರವಾಗಿ ಭಾಗಿಯಾಗದ ಅಂದಿನ ಕಾರ್ಯಕಾರಿ ಮಂಡಳಿ ಸದಸ್ಯರುಗಳ ವಿರುದ್ಧ ನೂತನವಾಗಿ ಆಯ್ಕೆಯಾಗುವ ಕಾರ್ಯಕಾರಿ ಮಂಡಳಿರವರು ಕರೆಯುವ ಸರ್ವ ಸದಸ್ಯರ / ವಿಶೇಷ ಸಭೆಯ ಅಂತಿಮ ನಿರ್ಣಯಕ್ಕೆ ಬಿಡಲಾಗಿರುತ್ತದೆ.

ಮುಂದುವರೆದು ಆಡಳಿತಾಧಿಕಾರಿಗಳು ಅಸೋಸಿಯೇಷನ್‌ನ ವಾರ್ಷಿಕ ಸಭೆಯನ್ನು ಮುಂದೆ ಆಯ್ಕೆಯಾಗುವ ನೂತನ ಕಾರ್ಯಕಾರಿ ಮಂಡಳಿಯು ನಡೆಸುವಂತೆ ತೀರ್ಮಾನಿಸಿ ದಿನಾಂಕ : 22-02-2026 ರಂದು ಅಸೋಸಿಯೇಷನ್ ಕಾರ್ಯಕಾರಿ ಮಂಡಳಿ ಸದಸ್ಯರುಗಳ ಚುನಾವಣೆಯನ್ನು ಚುನಾವಣಾ ದಿನಾಂಕದಿಂದ ಮುಂದಿನ ಎರಡು ವರ್ಷಗಳ ಅವಧಿಗೆ ನಿಗಧಿಪಡಿಸಲಾಗಿರುತ್ತದೆ. ಈ ಸಂಬಂಧ ಅಸೋಸಿಯೇಷನ್‌ನ ಸರ್ವ ಸದಸ್ಯರ ಸಭೆಯನ್ನು ನೂತನ ಕಾರ್ಯಕಾರಿ ಮಂಡಳಿ ಸದಸ್ಯರುಗಳು ನಡೆಸುವಂತೆ ತೀರ್ಮಾನಿಸಿ ಚುನಾವಣೆಯನ್ನು ಮಾತ್ರ ನಡೆಸಲಾಗುವುದೆಂದು ತಿಳಿಸಿ ನಿಗಧಿಪಡಿಸಿದ ದಿನಾಂಕದಂದು ನಿಯಾಮಾನುಸಾರ ಚುನಾವಣೆ ನಡೆಸಿಕೊಡುವಂತೆ ಚುನಾವಣಾಧಿಕಾರಿಯನ್ನು ದಿನಾಂಕ : 27-01-2026 ರಂದು ಕೋರಲಾಗಿರುತ್ತದೆ.

ದಿ ಮಲ್ಲೇಶ್ವರಂ ಅಸೋಸಿಯೇಷನ್ ಇದರ ಆಜೀವ ಮತ್ತು ಕ್ರಮಬದ್ಧ ಸದಸ್ಯರ ಚುನಾವಣೆಯು ಬೈಲ ಉಪನಿಯಮ 4.28 (ಕೆ) ಅನ್ವಯ ದಿನಾಂಕ 22-02-2026ನೇ ಭಾನುವಾರ ಬೆಳಿಗ್ಗೆ 10-00 ರಿಂದ 4-00 ಗಂಟೆಯ ವರೆಗೆ ಸಂಸ್ಥೆಯ ಆವಣದಲ್ಲಿ ನಡೆಯುತ್ತಿದ್ದು ಚುನಾವಣೆಯಲ್ಲಿ ಭಾಗವಹಿಸಲು ಕೋರುತ್ತೇನೆ.

ಗೆ,
ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ) ಆಜೀವ ಮತ್ತು ಕ್ರಮಬದ್ಧ ಮತ ಚಲಾಯಿಸುವ ಸದಸ್ಯರುಗಳಿಗೆ,

ಸಹಿ/-
ಆಡಳಿತಾಧಿಕಾರಿ
ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)
ಮಲ್ಲೇಶ್ವರಂ, ಬೆಂಗಳೂರು.

**(ವಿಶೇಷ ಸೂಚನೆ: ದಿನಾಂಕ : 22-02-2026 ರಂದು ಚುನಾವಣಾ ಪ್ರಯುಕ್ತ ಅಸೋಸಿಯೇಷನ್ ಸದಸ್ಯರಗಳಿಗೆ ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ ಲಘು ಉಪಹಾರದ ವ್ಯವಸ್ಥೆ ಕಲ್ಪಿಸಲಾಗಿದೆ.)**

# ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)

# THE MALLESWARAM ASSOCIATION (REGD.)

No. 110, 7th Cross, Malleswaram, Bangalore – 560 003
Ph : 080-23311276 / 080-23311388
e-mail : themalleswaramassociation@gmail.com website:tmaclub.in

## ಚುನಾವಣಾ ನೋಟೀಸು

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಆದೇಶ ಸಂಖ್ಯೆ: ಡಿಆರ್‌ಬಿ–4/ಎಸ್‌ಓಆರ್/ಚುನಾವಣೆ/2024–25, ದಿನಾಂಕ: 30–07–2024 ರನ್ವಯ ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)., ಮಲ್ಲೇಶ್ವರಂ, ಬೆಂಗಳೂರು ಈ ಸಂಘದ ಕಾರ್ಯಕಾರಿ ಮಂಡಲಿಗೆ ಚುನಾವಣೆಯನ್ನು ನಡೆಸಲು ನನ್ನನ್ನು ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಅದರಂತೆ, ಸಂಘದ 2026 ರಿಂದ 2028ನೇ ಸಾಲುಗಳ ಅವಧಿಗೆ ಕಾರ್ಯಕಾರಿ ಮಂಡಲಿ ಚುನಾವಣೆಯನ್ನು, ಚುನಾವಣಾ ದಿನಾಂಕದಿಂದ ಎರಡು (2) ವರ್ಷಗಳ ಅವಧಿಗೆ ನಡೆಸಲಾಗುವುದು. ಚುನಾವಣೆಯು ದಿನಾಂಕ: 22–02–2026 ರ ಭಾನುವಾರ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸಂಘದ ಆವರಣದಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ.

**ಚುನಾವಣಾ ಸೂಚನಾಪಟ್ಟಿ ಸಂಘದ ಉಪ ನಿಯಮ ಸಂಖ್ಯೆ: 5.01 ರನ್ವಯ ಈ ಕೆಳಕಂಡಂತಿರುತ್ತದೆ.**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರಗಳು | ಸಮಯ | ಸೂಚನೆ ದಿನಾಂಕ | |
|---|---|---|---|---|
| 1. | ಸುಸ್ತಿದಾರರ ಪಟ್ಟಿ ಪ್ರಕಟಣೆ | ಮಧ್ಯಾಹ್ನ 3.00 | ದಿನಾಂಕ: 31–01–2026 | ಸಂಘದ ನಾಮಫಲಕದಲ್ಲಿ |
| 2. | ನಾಮ ಪತ್ರಗಳ ನೀಡಿಕೆ | ಮಧ್ಯಾಹ್ನ 3.00 ರಿಂದ | ದಿನಾಂಕ: 31–01–2026 | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಯವರಿಂದ / ವ್ಯವಸ್ಥಾಪಕರವರಿಂದ |
| 3. | ನಾಮ ಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ | ಮಧ್ಯಾಹ್ನ 12 ಗಂಟೆ ಒಳಗೆ | ದಿನಾಂಕ: 09–02–2026 | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಯವರಿಗೆ / ವ್ಯವಸ್ಥಾಪಕರಿಗೆ |
| 4. | ಅಭ್ಯರ್ಥಿಗಳ ನಾಮಪತ್ರ ಪರಿಶೀಲನೆ ಮತ್ತು ತಾತ್ಕಾಲಿಕ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | ಸಂಜೆ 6 ಗಂಟೆಗೆ | ದಿನಾಂಕ: 09–02–2026 | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಯವರಿಂದ |
| 5. | ನಾಮಪತ್ರ ಹಿಂಪಡೆಯುವಿಕೆ ಮತ್ತು ಅಭ್ಯರ್ಥಿಗಳ ಅಂತಿಮ ಪಟ್ಟಿಯ ಪ್ರಕಟಣೆ | ಮಧ್ಯಾಹ್ನ 3.00 | ದಿನಾಂಕ: 11–02–2026 | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಯವರಿಗೆ / ವ್ಯವಸ್ಥಾಪಕರಿಗೆ |
| 6. | ಅಭ್ಯರ್ಥಿಗಳ ಅಂತಿಮ ಪಟ್ಟಿಯ ಪ್ರಕಟಣೆ | | ದಿನಾಂಕ: 13–02–2026 | ಸಂಘದ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಯವರಿಂದ |
| 7. | ಮತದಾನದ ಸಮಯ, ದಿನಾಂಕ ಮತ್ತು ಸ್ಥಳ | ಬೆಳಗ್ಗೆ 10.00 ರಿಂದ ಸಂಜೆ 4.00 | ದಿನಾಂಕ: 22–02–2026 | ದಿ ಮಲ್ಲೇಶ್ವರಂ ಅಸೋಸಿಯೇಷನ್, ಮಲ್ಲೇಶ್ವರಂ, ಬೆಂಗಳೂರು. |

**ಗಮನಿಸಿ: ಚುನಾವಣೆಗೆ ಅನ್ವಯವಾಗುವ ನಿಯಮಗಳನ್ನು ಚುನಾವಣಾ ಸೂಚನಾ ಪತ್ರದಲ್ಲಿ ವಿವರಿಸಿದೆ.**

### 4.17 ಬೈಲಾ ಉಪನಿಯಮ:

ಬೈಲಾ ಉಪನಿಯಮ ಸಂಖ್ಯೆ 4.17 ರನ್ವಯ ಸಂಘದ ಕಾರ್ಯಕಾರಿ ಮಂಡಳಿಗೆ ಒಂದು ಅಧ್ಯಕ್ಷರು, ಒಂದು ಉಪಾಧ್ಯಕ್ಷರು, ಒಂದು ಗೌರವ ಕಾರ್ಯದರ್ಶಿ, ಒಂದು ಗೌರವ ಜಂಟಿ ಕಾರ್ಯದರ್ಶಿ, ಒಂದು ಗೌರವ ಖಜಾಂಚಿ ಹಾಗೂ ಒಂಬತ್ತು ಕಾರ್ಯಕಾರಿ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಬೇಕಾಗಿರುತ್ತದೆ.

### 5.02 ನಾಮಪತ್ರ

1. ಸುಸ್ತಿದಾರ ಸದಸ್ಯರ ಪಟ್ಟಿಯನ್ನು ಚುನಾವಣೆಯ ಸೂಚನೆಯೊಂದಿಗೆ ಏಕಕಾಲದಲ್ಲಿಯೇ ಸೂಚನಾಫಲಕದಲ್ಲಿ ಪ್ರಕಟಿಸಬೇಕು.
2. ಸುಸ್ತಿದಾರರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ಚುನಾವಣೆಗೆ ನಾಮಪತ್ರ ಸಲ್ಲಿಸಲು ಅಥವಾ ಇತರರ ನಾಮಪತ್ರಕ್ಕೆ ಸೂಚಕರಾಗಿ / ಅನುಮೋದಕರಾಗಿ ಸಹಿ ಮಾಡಲು ಅನರ್ಹರಾಗಿರುತ್ತಾರೆ.
3. ಸತತವಾಗಿ ಎರಡು ಅವಧಿಗೆ ಯಾರಾದರೂ ಚುನಾಯಿತರಾಗಿದ್ದಲ್ಲಿ ಎರಡು ವರ್ಷಗಳ ವಿರಾಮವನ್ನು ಗಮನಿಸತಕ್ಕದ್ದು.
4. ಈ ವಿರಾಮದ ನಂತರ, ಪುನಃ ಸ್ಪರ್ಧಿಸಲು ಅದೇ ಸದಸ್ಯರು ಅರ್ಹರಾಗಿರುತ್ತಾರೆ.
5. ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸುವ ಸದಸ್ಯರು ನಿಗದಿತ ನಾಮಪತ್ರದಲ್ಲಿ ಒಬ್ಬ ಸದಸ್ಯರು ಸೂಚಿಸಿರಬೇಕು, ಮತ್ತು ಬೇರೆ ಇಬ್ಬರು ಸದಸ್ಯರು ಅನುಮೋದಿಸಬೇಕು.
6. ಸೂಚಕನು, ಅನುಮೋದಕರು ಮತ್ತು ಅವರಿಂದ ನೇಮಿಸುವ ಅಭ್ಯರ್ಥಿಯು, ಸಂಸ್ಥೆಯ ಸದಸ್ಯರಾಗಿ ಐದು ವರ್ಷಗಳ ಅವಧಿಗಿಂತ ಕಡಿಮೆಯಿರಬಾರದು.
7. ನಾಮಪತ್ರಗಳನ್ನು ಸಲ್ಲಿಸುವ ದಿನಾಂಕದಂದು, ಅಭ್ಯರ್ಥಿ, ಸೂಚಕರು ಮತ್ತು ಅನುಮೋದಕರು ಯಾವುದೇ ನಿಯಮದಡಿ ಅನರ್ಹಗೊಂಡಿರಬಾರದು.
8. ಅಭ್ಯರ್ಥಿಯ ಸ್ವವಿವರ ಮತ್ತು ಭಾವಚಿತ್ರ ಸೇರಿದಂತೆ ಎಲ್ಲಾ ರೀತಿಯಲ್ಲೂ ಪೂರ್ಣಗೊಂಡಿರುವ ನಾಮಪತ್ರಗಳನ್ನು ಸ್ವೀಕರಿಸಲು ಗೊತ್ತುಪಡಿಸಿರುವ ದಿನಾಂಕ ಮತ್ತು ಮುಕ್ತಾಯಗೊಳ್ಳುವ ಸಮಯದೊಳಗೆ ಕಚೇರಿಯಲ್ಲಿಟ್ಟಿರುವ ಮೊಹರಾದ ಪೆಟ್ಟಿಗೆಯೊಳಗೆ ಹಾಕಬೇಕು.
9. ಚುನಾವಣೆ ಪ್ರಕ್ರಿಯೆಯು ಪೂರ್ಣಗೊಳ್ಳುವಂತೆ ಆಡಳಿತಾಧಿಕಾರಿಯು ಚುನಾವಣಾಧಿಕಾರಿಯೊಬ್ಬರನ್ನು ನೇಮಿಸುವುದು. ಚುನಾವಣಾಧಿಕಾರಿಯು ಅಭ್ಯರ್ಥಿಯಾಗಿ ಅವರ ನಾಮಪತ್ರವನ್ನು ಸಲ್ಲಿಸಬಾರದು. ಚುನಾವಣಾಧಿಕಾರಿಯವರು ಅವರಿಗೆ ಸಹಕರಿಸಲು, ಅವರಿಗೆ ಸರಿಬಂದಂತೆ ಮತಾಧಿಕಾರಿಯನ್ನು ನೇಮಿಸಿಕೊಳ್ಳಬಹುದು.
10. ನಾಮಪತ್ರಗಳನ್ನು ಸ್ವೀಕರಿಸಲು ಮುಕ್ತಾಯಗೊಂಡ ದಿನಾಂಕ ಮತ್ತು ಸಮಯದಂದು ಅಭ್ಯರ್ಥಿಗಳು/ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಚುನಾವಣಾಧಿಕಾರಿಯವರು ಮೊಹರಾಗಿರುವ ಪೆಟ್ಟಿಗೆಯನ್ನು ತೆರೆಯುವುದು.
11. ಎಲ್ಲಾ ನಾಮಪತ್ರಗಳನ್ನು ಅವುಗಳ ಅರ್ಹತೆ ಬಗ್ಗೆ ಚುನಾವಣಾಧಿಕಾರಿಯವರು ಪರಿಶೀಲಿಸುವುದು. ಪರಿಶೀಲನೆಯ ಸಂದರ್ಭದಲ್ಲಿ ನಾಮಪತ್ರಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವುದರಲ್ಲಿ ಚುನಾವಣಾಧಿಕಾರಿಯವರ ತೀರ್ಮಾನವೇ ಅಂತಿಮವಾದುದು.
12. ಅಂಗೀಕಾರಗೊಳ್ಳುವ ಅಭ್ಯರ್ಥಿಗಳ ನಾಮಪತ್ರಗಳು, ಸ್ವವಿವರ ಮತ್ತು ಭಾವಚಿತ್ರಗಳನ್ನು ಪ್ರತ್ಯೇಕಿಸಿ ಮುಂದಿನ ಕ್ರಮಕ್ಕಾಗಿ ಕಛೇರಿಗೆ ಹಸ್ತಾಂತರಿಸುವುದು. ಅಂಗೀಕೃತಗೊಂಡ ನಾಮಪತ್ರಗಳನ್ನು ಅಲ್ಲದೇ ತಿರಸ್ಕೃತಗೊಂಡ ನಾಮಪತ್ರಗಳನ್ನು ಚುನಾವಣಾಧಿಕಾರಿಯವರು ಪ್ರತ್ಯೇಕವಾಗಿ ಮೊಹರು ಮಾಡುವುದು ಮತ್ತು ಸುರಕ್ಷಿತವಾಗಿಡಲು ಸಂಸ್ಥೆಯ ಆಡಳಿತಾಧಿಕಾರಿಗೆ ಹಸ್ತಾಂತರಿಸುವುದು.
13. ಅಂಗೀಕಾರಗೊಂಡ ಅಭ್ಯರ್ಥಿಗಳ ನಾಮಪತ್ರಗಳ ತಾತ್ಕಾಲಿಕ ಪಟ್ಟಿಯನ್ನು ಸೂಚಕರ ಮತ್ತು ಅನುಮೋದಕ ಹೆಸರುಗಳೊಂದಿಗೆ ತಕ್ಷಣವೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

### 5.0.3 ಹಿಂಪಡೆಯುವಿಕೆ:

ಯಾವುದೇ ಅಭ್ಯರ್ಥಿಯು ಚುನಾವಣೆಯಿಂದ ಹಿಂದೆ ಸರಿಯಲು ಇಚ್ಛೆಪಟ್ಟಲ್ಲಿ ನಾಮಪತ್ರಗಳನ್ನು ಹಿಂಪಡೆಯಲು ನಿಗದಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ, ಚುನಾವಣಾಧಿಕಾರಿಯವರಿಗೆ ಲಿಖಿತ ಮೂಲಕ ತಿಳಿಸುವುದು.

**5.04 ಅಭ್ಯರ್ಥಿಗಳ ಅಂತಿಮ ಪಟ್ಟಿ**

1. ಚುನಾವಣೆಗೆ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಸೂಚಕರ ಮತ್ತು ಅನುಮೋದಕರ ಹೆಸರುಗಳೊಂದಿಗೆ, ನಾಮಪತ್ರಗಳನ್ನು ಹಿಂಪಡೆಯಲು ನಿಗದಿ ಪಡಿಸಿರುವ ದಿನಾಂಕ ಮತ್ತು ಸಮಯದ ನಂತರ ತಕ್ಷಣವೇ ಚುನಾವಣಾಧಿಕಾರಿಯವರು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

**5.05 ಚುನಾವಣೆಯ ಕಾರ್ಯವಿಧಾನ**

1. ಅಭ್ಯರ್ಥಿಗಳ ಸಂಖ್ಯೆಯ ಭರ್ತಿಯಾಗಬೇಕಾಗಿರುವ ಸ್ಥಾನಗಳ ಸಂಖ್ಯೆಯನ್ನು ಮೀರದಿದ್ದಲ್ಲಿ ಮತದಾನದ ಆವಶ್ಯಕತೆಯಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಚುನಾವಣಾಧಿಕಾರಿಯವರು ಫಲಿತಾಂಶವನ್ನು ಸಂಘದ ನಾಮ ಫಲಕದಲ್ಲಿ ಪ್ರಕಟಿಸುವುದು.
2. ಅನರ್ಹಗೊಂಡಿರುವ ಅಥವಾ ಸುಸ್ತಿದಾರರನ್ನು ಹೊರತುಪಡಿಸಿದ ಸದಸ್ಯರು ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಬದಲಿ" ಮತದಾನಕ್ಕೆ ಅವಕಾಶವಿರುವುದಿಲ್ಲ.
3. ಚುನಾವಣೆಯು ರಹಸ್ಯ ಮತದಾನದ ಮೂಲಕ ನಡೆಯುವುದು, ಮತದಾನವನ್ನು ಕಾಗದದ ಮತಪತ್ರ ಅಥವಾ ವಿದ್ಯುನ್ಮಾನ ಯಂತ್ರ ಉಪಯೋಗಿಸುವುದರ ಮೂಲಕ ನಡೆಸಬಹುದು, ವಿದ್ಯುನ್ಮಾನ ಮತದಾನದ ಸಂದರ್ಭದಲ್ಲಿ ಚುನಾವಣಾಧಿಕಾರಿಯವರು ವಿದ್ಯುನ್ಮಾನ ಯಂತ್ರಗಳನ್ನು ಉಪಯೋಗಿಸುವುದರ ಬಗೆಗೆ ವಿವರಣೆ ನೀಡುವುದು.
4. ಮತದಾನದ ವಿಧಾನದಲ್ಲಿ ಅವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಚುನಾವಣಾಧಿಕಾರಿಗಳು ಮತಾಧಿಕಾರಿಗಳನ್ನು ನೇಮಿಸಿಕೊಳ್ಳಬಹುದು. ನಿರ್ಗಮಿಸುತ್ತಿರುವ ಸಮಿತಿ ಸದಸ್ಯರಾಗಲೀ ಅಥವಾ ಅಭ್ಯರ್ಥಿಗಳಾಗಲೀ ಮತಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುವಂತಿಲ್ಲ.
5. ಪ್ರತಿ ಸದಸ್ಯರು ಪ್ರತಿ ಪದಾಧಿಕಾರಿಗಳ ಹುದ್ದೆಗೆ ಒಂದೊಂದು ಮತವನ್ನು ಮಾತ್ರ ಚಲಾಯಿಸಬೇಕು ಮತ್ತು ನಿರ್ವಾಹಕ ಸಮಿತಿಯ ಒಂಬತ್ತು (9) ಸದಸ್ಯರಿಗೆ ಮಾತ್ರ ಮತ ಚಲಾಯಿಸಬೇಕು.
6. ಸದಸ್ಯರಿಂದ ಚುನಾಯಿಸಲ್ಪಟ್ಟ ಮತವು ಪದಾಧಿಕಾರಿಗಳ ಹುದ್ದೆಗಳ ಹಾಗೂ ನಿರ್ವಾಹಕ ಸಮಿತಿಯ ಒಂಬತ್ತು (9) ಸದಸ್ಯರ ಸಂಖ್ಯೆಯನ್ನು ಮೀರಿದ ಪಕ್ಷದಲ್ಲಿ ಅಥವಾ ಕಡಿಮೆ ಇದ್ದಲ್ಲಿ ಅದನ್ನು ತಿರಸ್ಕೃತ ಮತವೆಂದು ಪರಿಗಣಿಸಲಾಗುವುದು.
7. ಮತದಾನದ ನಿಗದಿತ ಸಮಯದ ಮುಕ್ತಾಯದ ನಂತರ, ಚುನಾವಣಾಧಿಕಾರಿಯವರು ಹಾಜರಿರುವ ಅಭ್ಯರ್ಥಿಗಳ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಮತಗಳ ಎಣಿಕೆಯನ್ನು ಪ್ರಾರಂಭಿಸುವುದು.
8. ಮತಗಳ ಎಣಿಕೆಯ ನಂತರ ಚುನಾವಣಾಧಿಕಾರಿಯವರು ಚುನಾವಣಾ ಫಲಿತಾಂಶಗಳನ್ನು ಪ್ರಕಟಿಸುವುದು.
9. ಅಭ್ಯರ್ಥಿಯೊಬ್ಬರು ಮನವಿ ಮಾಡಿದ ಸಂದರ್ಭದಲ್ಲಿ ಅಥವಾ ಫಲಿತಾಂಶವು ಸರಿಸಮವಾಗಿದ್ದಲ್ಲಿ, ಚುನಾವಣಾಧಿಕಾರಿಯವರು ಪುನರ್ ಎಣಿಕೆಯನ್ನು ಆರಂಭಿಸುವುದು ಮತ್ತು ಚುನಾವಣಾ ಫಲಿತಾಂಶಗಳನ್ನು ದೃಢೀಕರಿಸುವುದು. ಪುನರ್ ಎಣಿಕೆಯ ನಂತರವೂ ಸಮನಾದ ಫಲಿತಾಂಶವು ಮುಂದುವರೆದ ಪಕ್ಷದಲ್ಲಿ ಚೀಟಿ ಎತ್ತುವ (ಲಾಟರಿ) ಮೂಲಕ ವಿಷಯವನ್ನು ಬಗೆಹರಿಸುವುದು.

ಸ್ಥಳ: ಬೆಂಗಳೂರು.
ದಿನಾಂಕ:31–01–2026.

ಸಹಿ/–
(ಎನ್. ಚಂದ್ರಶೇಖರ್)
ಚುನಾವಣಾಧಿಕಾರಿ
ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)
ಮಲ್ಲೇಶ್ವರಂ, ಬೆಂಗಳೂರು–560003
ಹಾಗೂ
ಸಹಕಾರ ಅಭಿವೃದ್ಧಿ ಅಧಿಕಾರಿ,
2ನೇ ವಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ,
ಬೆಂಗಳೂರು–560003

ದಿ ಮಲ್ಲೇಶ್ವರಂ ಅಸೋಸಿಯೇಷನ್ (ರಿ)

**THE MALLESWARAM ASSOCIATION (REGD.)**

No. 110, 7th Cross, Malleswaram, Bangalore – 560 003
Ph : 080-23311276 / 080-23311388
e-mail : themalleswaramassociation@gmail.com website:tmaclub.in

I the Returning Officer, as per the order No. DRB-4/SOR/ELECTION/2024-25, Dt: 30-07-2024, of District Registrar of Societies, Zone-4, Bangalore City, hereby announce the schedule for holding the elections to the Managing Committee of the Association for Two Years (2) from the date of election for the years 2026-2028 on 22-02-2026. The Election will be held on Sunday, 22-02-2026 from Morning 10.00 a.m to Evening 4.00 p.m., which is as follows.

**ELECTION CALENDAR OF EVENTS:5.01**

| Sl. No. | Details of Events | TIME | Date of Notice | |
|---|---|---|---|---|
| 1. | Publication of defaulters list | 3.00 pm | 31-01-2026 | In the Notice Board of the Association |
| 2. | Issuing of nomination forms | 3.00 pm | 31-01-2026 | In the Office of the Association from the Election Officer/ Manager |
| 3. | Last date for submission of nomination forms | 12 noon | 09-02-2026 | To the Election Officer/ Manager |
| 4. | Scrutiny and publication of provisional list of candidates | At 6 pm | 09-02-2026 | From the Election Officer |
| 5. | Withdrawal of nominations and publication of final list of candidates. | 3.00 pm | 11-02-2026 | To the Election Officer/ Manager |
| 6. | Display of final list of candidates | | 13-02-2026 | From the Election Officer |
| 7. | Election Time, Date & Place | 10.00 a.m to 4.00 p.m | 22-02-2026 | The Malleshwaram Association, Bangalore |

**Note : The calendar of events shall also detail the rules applicable for elections**

**Bye Law 4.17 :**

As per Bye Law 4.17 the management of Association shall vest in a managing committee consisting of One President, One Vice President, One Hon. Secretary, One Joint Hon. Secretary, One Hon. Treasurer & Nine Committee Members.

**5.02 NOMINATION :**

a) The list of members in default shall be displayed simultaneously on the Notice Board with the Notice of Election

b) The members whose names appear featuring in the list of defaulters shall be disqualified from filling nomination for elections.

c) A break of minimum of one term i.e. two years should be observed for any one who has been elected consecutively for two terms.

d) After the break of one term such member is eligible to contest once again for any one post.

e) The nomination papers in the prescribed form of member contesting the Election as a candidate shall be proposed by one Life or Regular Member and seconded by two other Members, who are in good standing as on date of proposing or seconding.

f) The proposer, and seconder to the candidate to be nominated by them shall be the Members of the Association for a period of not less than five(5) years.

g) On the date of filing the nomination papers, the candidate, proposer and seconders should not have been disqualified under any of the Rules.

h) The nomination papers completed in all respects including the bio data and photograph of the candidate shall be dropped in the sealed box kept in the office for the purpose before the closing time and date set for receipt of nominations.

I) The Administrator shall appoint an Election Officer to be in-charge of the complete election process. The Election Officer shall not file his own nomination for his candidature. The Election Officer may co-opt Polling Assistant to assist him as he deems fit.

j) On close of the time and date of nomination the sealed box shall be opened by the Election Officer in the presence of the candidates/their representatives.

k) All nominations papers shall be scrutinized by the Election Officer regarding their validity. In the process of scrutiny the decision of the Election Officer as to accepting or rejecting of the nomination shall be final.

l) The bio data and photographs of the candidates whose nominations are accepted shall be segregated and handed over to the office for further process. The accepted nominations and also the rejected nomination papers shall be sealed separately by the Election Officer and handed over to the Administrator of the Association for safe keeping.

m) The list of provisional candidates whose nominations are accepted along with the names of proposer and seconder shall be immediately displayed on the Notice Board.

**5.03 WITHDRAWAL :**

Any candidate wishing to withdraw from the election shall do so in writing to the Election Officer on or before the time and date set for withdrawal.

**5.04 FINAL LIST OF CANDIDATES :**

a) The final list of candidates for the election along with the names of the proposer and seconder shall be displayed on the Notice Board by the Election Officer immediately after the time and date set for withdrawal.

**5.05 ELECTION PROCEDURE :**

1. No voting will be necessary if the number of candidates do not exceed the number of seats to be filled. In such an event the Election Officer shall announce the results on the Notice Board of the Association.
2. Members other than those who are disqualified or are defaulters shall be entitled to vote. There shall be no voting by proxy.
3. The elections will be by secret ballot. The voting may be conducted either by using paper ballots or electronic machines. In the event of electronic voting the Election Officer shall explain/ describe the use of electronic machines.
4. The Election Officer may co-opt Polling Officers to assist him/ her in the process of balloting. The out-going Managing Committee Members or the candidates shall not act as Polling Officers.
5. Every member should cast his vote for Office Bearers and Nine (9) members of the Managing Committee
6. Votes cast by a member shall be rendered invalid in case the votes cast exceed or less than the number of positions of Office Bearers and 9 members of the Managing Committee.
7. At the closure of the time set for voting, the Election Officer shall initiate counting of votes in the presence of the candidates or his/her representatives.
8. At the completion of counting the Election Officer shall handover the results of the Elections to the Administrator.
9. In case a candidate requests, or there is a tie the Election Officer shall initiate recounting and confirm the results of the Elections. In the event of continued tie after recounting the issue shall be resolved by drawing lots.
10. The presiding officer shall announce the Election results

**Place:** Bengaluru
**Date:** 31-01-2026

**Sd/-**
**Election Officer**
**The Malleswaram Association (R)**
Malleshwaram, Bangalore - 560 003.
**&**
**Cooperative Development Officer,**
**Office of the District Registrar of Societies,**
**2nd Zone, Bangalore City.**